ಉಪಾಧ್ಯಾಯರಿಲ್ಲದೆ ಆ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗಿದೆ. ಈ ವಿಚಾರದಲ್ಲಿ ಸರ್ಕಾರದಿಂದ ಈ ಆದೇಶ ಹೋದರೂ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳದೇ ಹೋದರೆ, ಮುಂದಿನ ಕ್ರಮ ಏನು? ಜಿಲ್ಲಾ ಪರಿಷತ್ ಚೀಫ್ ಸೆಕ್ರೆಟರಿಯವರು ಅಧ್ಯಕ್ಷರು ಹೇಳಿದಹಾಗೆ ಕೇಳಬೇಕೇ? ನಾನು ಮೊನ್ನೆ ಈ ಬಗ್ಗೆ ವಿಚಾರಿಸಿದಾಗ ಅಧ್ಯಕ್ಷರು ಹೇಳಿದ್ದಾರೆ, ನಾನು ಏನೂ ಮಾಡುವುದಕ್ಕಾಗುವುದಿಲ್ಲ ಎಂದು ಮುಖ್ಯ ಕಾರ್ಯದರ್ಶಿ ಅವರು ಹೇಳಿದ್ದಾರೆಂದು ಬೇರೆ ಉಪಾಧ್ಯಾಯರು ನನಗೆ ಹೇಳಿದರು. ಪರಿಸ್ಥಿತಿ ಈ ರೀತಿ ಇದೆ. ಇದನ್ನು ಯಾವ ರೀತಿ ಬಗೆಹರಿಸುತ್ತೀರಿ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಉಪಾಧ್ಯಕ್ಷರೆ ಸಭೆಯ ಮುಂದೆ ನಾನು ಈ ವಿಷಯವನ್ನು ಇಟ್ಟಿದ್ದೇನೆ. ನಿನ್ನೆ ತಾರೀಖು ೮ ಭಾನುವಾರ, ಇವತ್ತು ವರದಿ ಬಂದಿದೆಯೋ ಏನೋ ಗೊತ್ತಿಲ್ಲ. ಇದರ ಬಗ್ಗೆ ದೊಡ್ಡದಾಗಿ ಪ್ರಾತನಾಡುವುದು ಸರಿಯಲ್ಲ. ಕಾನೂನು ಪ್ರಕಾರ ಮುಖ್ಯ ಕಾರ್ಯದರ್ಶಿಯವರಿಗೆ ಜಾರಿ ಮಾಡಬೇಕೆಂದು ಹೇಳಿದ್ದೇನೆ. ಇವತ್ತು ಟೆಲಿಕ್ಸ್ ಮೆಸೇಜ್ ಕೂಡ ಹೋಗಿದೆ. ಆದೇಶ ಹೋಗಿದೆ. ಕಾದು ನೋಡುತ್ತೇವೆ. ಇಲ್ಲಿ ಜಿಲ್ಲಾ ಪರಿಷತ್ ಅಧ್ಯಕ್ಷರ ಬಗ್ಗೆ ಪ್ರಸ್ತಾಪ ಮಾಡುವುದಿಲ್ಲ. ನಮ್ಮ ಅಧಿಕಾರಿಗಳ ಮೂಲಕ ನಾವು ಮಾಡಿಸಬೇಕಾಗುತ್ತದೆ, ಅದನ್ನು ಮಾಡಿಸುತ್ತೇವೆ.

ಚಾಮರಾಜ ನಗರಕ್ಕೆ ಕುಡಿಯುವ ನೀರನ್ನು ಒದಗಿಸುವ ಬಗ್ಗೆ

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ, ಅದಕ್ಕೆ ಮುಂಚೆ ಒಂದು ವಿಚಾರ ಹೇಳಬೇಕಾಗಿದೆ. ನಗರಾಭಿವೃದ್ಧಿ ಸಚಿವರು ಬಂದಿದ್ದಾರೆ. ನೀರಿನ ಪ್ರಶ್ನೆ ಬಗ್ಗೆ ಕೇಳಬೇಕಾಗಿದೆ. ಚಾಮರಾಜ ನಗರದಲ್ಲಿ ಮೊನ್ನೆ ರಥೋತ್ಸವ ನಡೆಯುವಾಗ ಕೂಡ ನೀರು ಸರಬರಾಜು ಇರಲಿಲ್ಲ. ಕಳೆದ ೧೫ ದಿವಸದಿಂದ ಕುಡಿಯುವ ನೀರಿಗೆ ಅಸಾಧಾರಣವಾದ ತೊಂದರೆಯಾಗಿದೆ. ಇದರ ಬಗ್ಗೆ ಸಂಬಂಧಪಟ್ಟ ಸಚಿವರು ಹೇಳಿಕೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೆ, ಆಗಿಂದಾಗ್ಗೆ ಚಾಮರಾಜ ನಗರದಲ್ಲಿ ನೀರಿನ ತೊಂದರೆ ಬರುತ್ತಲೇ ಇದೆ. ಅಲ್ಲಿ ಖಾಯಂ ವ್ಯವಸ್ಥೆ ಮಾಡುವವರೆಗೆ ತಾವೂ ಕೂಡ ನಮ್ಮನ್ನು ಬಿಡುವುದಿಲ್ಲ. ಕುಡಿಯುವ ನೀರಿನ ಅನುಕೂಲಕ್ಕಾಗಿ ಖಾಯಂ ಆಗಿ ವ್ಯವಸ್ಥೆ ಮಾಡುವುದಕ್ಕೋಸ್ಕರ ಚಾಮರಾಜ ನಗರಕ್ಕೆ ಕುಡಿಯುವ ನೀರಿನ ಯೋಜನೆಗಾಗಿ ಆರೂವರೆ ಕೋಟಿ ರೂಪಾಯಿ ಯೋಜನೆಯನ್ನು ಪಾಂಜೂರು ಮಾಡಿದ್ದೇವೆ. ಶೀಘ್ರಗತಿಯಲ್ಲಿ ಈ ಕೆಲಸ ಮಾಡಲಾಗುವುದು. ಎಲ್ಲಾ ಕಾಲಕ್ಕೂ ಅಲ್ಲಿಗೆ ಖಾಯಂ ಆದ ನೀರಿನ ವ್ಯವಸ್ಥೆ ಮಾಡುತ್ತೇವೆ. ಅಲ್ಲಿಯವರೆಗೆ ಅವರು ಶಾಂತಿ ಮತ್ತು ಸಮಾಧಾನದಿಂದ ಇರಬೇಕೆಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಈ ಯೋಜನೆ ನನ್ನ ಪ್ರಕಾರ ನಾಳೆ ನಾಡಿದ್ದು ಮುಗಿಯುವುದಿಲ್ಲ. ಮುಂದಿನ ತಿಂಗಳು ಮಾನ್ಯ ಮುಖ್ಯ ಮಂತ್ರಿಗಳು ಬಂದು ಶಿಲಾನ್ಯಾಸ ಮಾಡುತ್ತಾರೆ. ಆದ್ದರಿಂದ ತಾತ್ಕಾಲಿಕವಾಗಿ ಏನಾದರೂ ಪರಿಹಾರ ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಚಾಮರಾಜನಗರದ ನಾಗರೀಕರಿಗೆ ಕುಡಿಯುವ ನೀರಿಗೆ ಯಾವುದೇ ರೀತಿಯ ಅಡಚಣೆ ಆಗದಂತೆ ನೋಡಿಕೊಳ್ಳುವ ಪೂರ್ಣ ಭರವಸೆಯನ್ನು ನಾನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಕೊಡುತ್ತೇನೆ.

ರಾಷ್ಟ್ರೀಯ ಥರ್ಮಲ್ ವಿದ್ಯುತ್ ನಿಗಮದ ಅಧಿಕಾರಿಗಳು ಮುಷ್ಕರ ಹೂಡಲು ನೋಟೀಸ್ ಕೊಟ್ಟಿರುವ ಬಗ್ಗೆ

ಶ್ರೀ ವಿ. ಎಸ್. ಕೌಜಲಗಿ.—ಮಾನ್ಯ ಉಪಾಧ್ಯಕ್ಷರೇ, ಇವತ್ತು ಮುಂಜಾನೆ ಪ್ರಜಾವಾಣಿಯಲ್ಲಿ ತಾವು ಓದಿರಬಹುದು. ಈ ಬಗ್ಗೆ ನಾನು ಗಮನ ಸೆಳೆಯುವ ಸೂಚನೆ ಕೂಡ ಕೊಟ್ಟಿದ್ದೇನೆ.

ಉಪಾಧ್ಯಕ್ಷರು.—ಗಮನ ಸೆಳೆಯುವ ಸೂಚನೆ ಯಾವುದೂ ಇಲ್ಲ.

ಶ್ರೀ ವಿ. ಎಸ್. ಕೌಜಲಗಿ.—ಮುಂಜಾನೆ ಕಳಿಸಿದ್ದೇನೆ. ಅಧ್ಯಕ್ಷರ ಅನುಮತಿ ತೆಗೆದುಕೊಂಡಿದ್ದೇನೆ. ರಾಷ್ಟ್ರೀಯ ಥರ್ಮಲ್ ವಿದ್ಯುತ್ ನಿಗಮದ ಅಧಿಕಾರಿಗಳು ಜುಲೈ ೧೦ ರಿಂದ ಮುಷ್ಕರ ಹೂಡುವುದಾಗಿ ನೋಟೀಸ್ ಕೊಟ್ಟಿದ್ದಾರೆ.